ದಿನಾಂಕ 16.06.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ **ಮುಖ್ಯ ವಿಚಾರಣೆಃ-** ವಾದಿ ಪರ ಶ್ರೀಮತಿ ಆರ್.ಆರ್ ವಕೀಲ **ರಿಂದ**

ಈ ದಾವೆಗೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರುಪಡಿಸಿದ್ದೇನೆ. ಅವುಗಳನ್ನು ನನ್ನ ಪರ ನಿಶಾನೆಗಳನ್ನಾಗಿ ಗುರುತಿಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

1. ದಿನಾಂಕ 08.09.2022 ರಂದು ಪ್ರತಿವಾದಿಯು ಮೃತ ನನ್ನ ಮಗನಾದ ರವಿಕುಮಾರ್ ರವರ ಪರವಾಗಿ ಬರೆದುಕೊಟ್ಟ ಆನ್ ಡಿಮ್ಯಾಂಡ್ ಪ್ರೋನೋಟ್ ಮತ್ತು ಹಣ ಸಂದಾಯ ರಶೀದಿಯನ್ನು ನಿಪಿ 1 ಎಂದು, ಪ್ರತಿವಾದಿಯ ಸಹಿಯನ್ನು ನಿಪಿ 1(ಎ) ಮತ್ತು 1(ಬಿ) ಎಂದು, ಸಾಕ್ಷಿದಾರರಾದ ಚನ್ನಕೇಶವಗೌಡ ಮತ್ತು ಪಿ.ಎಸ್ ಮಂಜುರವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ1(ಸಿ), ನಿ.ಪಿ.1(ಡಿ), ನಿ.ಪಿ.1(ಇ) ಮತ್ತು ನಿ.ಪಿ.1(ಎಫ್) ಎಂದು, ಪತ್ರ ಬರಹಗಾರರ ಸಹಿಗಳನ್ನು ನಿ.ಪಿ1(ಜಿ) ಮತ್ತು ನಿ.ಪಿ.1(ಹೆಚ್) ಎಂದು ಗುರುತಿಸಲಾಯಿತು.

2. ದಿನಾಂಕ 08.09.2022 ರಂದು ಪ್ರತಿವಾದಿಯು ಮೃತ ನನ್ನ ಮಗನಾದ ರವಿಕುಮಾರ್ ರವರ ಪರವಾಗಿ ಬರೆದುಕೊಟ್ಟ ಆನ್ ಡಿಮ್ಯಾಂಡ್ ಪ್ರೋನೋಟ್ ಮತ್ತು ಹಣ ಸಂದಾಯ ರಶೀದಿಯನ್ನು ನಿಪಿ 2 ಎಂದು, ಪ್ರತಿವಾದಿಯ ಸಹಿಯನ್ನು ನಿಪಿ 2(ಎ) ಮತ್ತು 2(ಬಿ) ಎಂದು, ಸಾಕ್ಷಿದಾರರಾದ ಚನ್ನಕೇಶವಗೌಡ ಮತ್ತು ಪಿ.ಎಸ್ ಮಂಜುರವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅವುಗಳನ್ನು ನಿ.ಪಿ2(ಸಿ), ನಿ.ಪಿ.2(ಡಿ), ನಿ.ಪಿ.2(ಇ) ಮತ್ತು ನಿ.ಪಿ.2(ಎಫ್) ಎಂದು, ಪತ್ರ ಬರಹಗಾರರ ಸಹಿಗಳನ್ನು ನಿ.ಪಿ2(ಜಿ) ಮತ್ತು ನಿ.ಪಿ.2(ಹೆಚ್) ಎಂದು ಗುರುತಿಸಲಾಯಿತು.

3. ದಿನಾಂಕ 09.10.2024 ರಂದು ಪ್ರತಿವಾದಿಗೆ ಕಳುಹಿಸಿದ ಲೀಗಲ್ ನೋಟಿಸಿನ ಕಛೇರಿ ಪ್ರತಿಯನ್ನು ನಿ.ಪಿ.3 ಎಂದು,

4. ಅಂಚೆ ರಶೀದಿಯನ್ನು ನಿಪಿ 4 ಎಂದು,

5. ಪ್ರತಿವಾದಿಗೆ ಜಾರಿಯಾಗದೇ ಹಿಂದಿರುಗಿದ ಒಂದು ಅಂಚೆ ಲಕೋಟೆಯನ್ನು ನ್ಯಾಯಾಲಯದ ಮುಂದೆ ತೆರೆದು ನೋಡಲಾಗಿ ಅದರೊಳಗಿರುವ ಒಂದು ನೋಟಿಸನ್ನು ನಿ.ಪಿ5 ಎಂದು, ಅಂಚೆ ಲಕೋಟೆಯನ್ನು ನಿ.ಪಿ5(ಎ) ಎಂದು,

6. ಮೃತ ರವಿಕುಮಾರ್ ರವರ ಮರಣ ಧೃಢೀಕರಣ ಪತ್ರವನ್ನು ನಿಪಿ 6 ಎಂದು ಗುರುತಿಸಲಾಯಿತು.

ಈ ಎಲ್ಲಾ ಕಾರಣಗಳಿಗಾಗಿ ನಾನು ಸಲ್ಲಿಸಿರುವ ದಾವೆಯನ್ನು ಡಿಕ್ರಿ ಮಾಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಪಾಟೀ ಸವಾಲು: ಪ್ರತಿವಾದಿಗಳ ಪರ ವಕೀಲರು ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಸಾಕ್ಷಿಗೆ ಓದಿ ಹೇಳಿ ಕೇಳಿ ಸರಿ ಇದೆ.

(ದೇವರಾಜು ಹೆಚ್.ಆರ್)
1 ನೇ ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ ಕೆ.ಆರ್.ಪೇಟೆ.